ಇತರ ಗುಡಿ ಕೈಗಾರಿಕೆಗಳಿಗೆ ಬೇಕಾಗುವ ವಸ್ತುಗಳನ್ನು ಬೆಳೆಯುವುದಕ್ಕೆ ೫೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ. ಪಶ್ಚಿಮ ಘಟ್ಟದಲ್ಲಿ ಏನು ಅರಣ್ಯ ಸಂಪತ್ತು ಇದೆ ಅದನ್ನು ರಕ್ಷಣೆ ಮಾಡುವುದಕ್ಕೆ ಈ ಯೋಜನೆ ಹಾಕಿಕೊಳ್ಳಲಾಗಿದೆ.

ಶ್ರೀ ಬಿ. ಬೈರಪ್ಪಾಜಿ.— ಈ ಹಿಂದೆ ಹರಿಹರ ಫಾಲಿಬೈಬರ್ಸ್ ಹಾಗೂ ಇತರ ಸಂಸ್ಥೆಗಳಿಗೆ ಬಹಳ ಕಡಿಮೆ ದರದಲ್ಲಿ ಮರಗಳನ್ನು ಸರಬರಾಜು ಮಾಡಿದ್ದೀರಿ. ಅರಣ್ಯ ಸಂಪತ್ತು ಕಡಿಮೆ ಆಗುವುದಕ್ಕೆ ಇದೂ ಒಂದು ಕಾರಣ. ಇದೂ ಒಂದು ಅರಣ್ಯ ಸಂಪತ್ತು ಹೆಚ್ಚು ಆಗುವುದಕ್ಕೆ ಅಡ್ಡಿಯಾಗಿದೆ. ಮತ್ತು ಯಾರೋ ಕೋಟ್ಯಾಧೀಶ್ವರರನ್ನು ಅನುಕೂಲಗೊಳಿಸುವ ರೀತಿಯಲ್ಲಿ ಈ ಕೆಲಸಗಳು ನಡೆಯುತ್ತಿದ್ದು ಈ ಒಂದು ಕೆಲಸವನ್ನು ತಪ್ಪಿಸುವುದಕ್ಕೆ ತಾವು ಸಭೆಯ ಮುಂದೆ ಶಾಸನ ತಂದು ಹೆಚ್ಚು ಆದಾಯ ಬರುವ ರೀತಿಯಲ್ಲಿ ಏರ್ಪಾಡು ಮಾಡುತ್ತೀರಾ ?

ಶ್ರೀ ಬಿ.ಎ. ಜೀವಿಜಯ.—ಸಿನೇಯೋರೇಜ್ ರೇಟನ್ನು ೧೯೬೦ನೇ ಇಸವಿಯಲ್ಲಿ ಮರು ಪರಿಶೀಲನೆ ಮಾಡಲಾಗಿದೆ. ಆಗ ೨೦೫ ರೂಪಾಯಿಗಳ ದರದಲ್ಲಿ ಹರಿಹರ ಫಾಲಿಫೈಬರ್ಸ್‌ಗೆ ಕೊಡುವುದಕ್ಕೆ ಸರ್ಕಾರ ಒಂದು ಕಾನೂನು ತಿದ್ದುಪಡಿ ಮಾಡಿದೆ. ಇನ್ನು ೨ ವರ್ಷ ಆದಮೇಲೆ ಅದನ್ನು ಪುನಃ ಪರಿಶೀಲನೆ ಮಾಡಬಹುದು. ಆದರೆ ಪ್ಲಾಂಟೇಷನ್ ಕಾರ್ಪೊರೇಷನ್‌ನವರು ೨೭೫ ರೂಪಾಯಿಗಳಿಗೆ ಒಂದುಟನ್ ಎಂದು ಹೇಳಿ ಹರಿಹರ ಫಾಲಿಫೈಬರ್ಸ್‌ಗೆ ಸಪ್ಲೈ ಮಾಡುತ್ತಿದ್ದಾರೆ. ಇನ್ನು ಮಾನ್ಯ ಸದಸ್ಯರು ಏನು ಸಲಹೆ ಕೊಟ್ಟಿದ್ದಾರೆ ಅದನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ.

ಅಧ್ಯಕ್ಷರು. - ಪ್ರಶ್ನೋತ್ತರ ವೇಳೆ ಮುಂಗಿಯಿತು,

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು.
ಪರಿಹಾರ ಧನ ಕೊಡುವ ಬಗ್ಗೆ.

೨೫೬. ಶ್ರೀ ಹಿರೋಜಿ ವಿ. ಎಸ್. ಲಾಡ (ಸಂಡೂರು).—ಈ ಕೆಳ ಕಂಡ ಪ್ರಶ್ನೆಗಳಿಗೆ ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಬಳ್ಳಾರಿ ಡಿಸ್ಟ್ರಿಕ್ಟ್‌ನ ಸಂಡೂರು ತಾಲ್ಲೂಕು ಮುಲಿಕುಂಟ ಕೆರೆಯ ನಿರ್ಮಾಣಕ್ಕಾಗಿ ಗಳಿಸಿದ ರೈತರ ಜಮೀನಿಗೆ ಪರಿಹಾರ ಧನವನ್ನು ಕೊಡಲಾಗಿದೆಯೇ ?

ಆ) ಮುಳುಗಡೆ ಜಮೀನಿನ ಅಧಿಸೂಚನೆಯ (Notification) ನಂತರ ಕೆಲವು ಜಮೀನು ಮುಳುಗಡೆ ಪ್ರದೇಶದಲ್ಲಿ ಬಂದರೂ, ಅಧಿಸೂಚನೆಯೊಳಗೆ ಸೇರದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ಸರ್ಕಾರವು ಈ ಹೆಚ್ಚು ಪರಿ ಮುಳುಗಡೆ ಜಮೀನನ್ನು ಅಧಿಸೂಚನೆಯೊಳಗೆ ಸೇರಿಸಲು ಕ್ರಮ ಕೈಗೊಂಡಿದೆಯೇ ಹಾಗೂ ಪರಿಹಾರ ಧನವನ್ನು ಈ ಜಮೀನುಗಳಿಗೆ ಕೊಡಲಾಗಿದೆಯೇ ?

ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು).—

ಅ) ಪರಿಹಾರ ಧನವನ್ನು ಭಾಗಶಃ ಕೊಡಲಾಗಿದೆ.

ಆ) ಮುಳುಗಡೆ ಪ್ರದೇಶದಲ್ಲಿ ಬರುವ ಸ್ವಲ್ಪ ಜಮೀನು ಅಧಿಸೂಚನೆಯೊಳಗೆ (Notification) ಸೇರದಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಮತ್ತು ಕಂದಾಯ ಇಲಾಖೆಯನ್ನು ಈ ಜಮೀನನ್ನು ಅಧಿಸೂಚನೆಯೊಳಗೆ ಸೇರಿಸಲು ಕೇಳಲಾಗಿದೆ. ಅವಾರ್ಡ್ ಮುಂಜೂರು ಆದ ನಂತರ ಪರಿಹಾರ ಧನವನ್ನು ಕೊಡಲಾಗುವುದು.

ತುಂಗಭದ್ರಾ ಫೈಬರ್ಸ್ ಕಾರ್ಖಾನೆಯಲ್ಲಿ ಸ್ಥಳೀಯ ಅಭ್ಯರ್ಥಿಗಳ ಆಯ್ಕೆಯ ಬಗ್ಗೆ.

೨೫೭. ಶ್ರೀ ಜಿ. ಶಂಕರಗೌಡ (ಹೊಸಪೇಟೆ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಕೈಗಾರಿಕಾ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ?

ಅ) ಮುನಿರಾಬಾದ್‌ಗೆ ಸೇರಿದ ಹೊಸಹಳ್ಳಿಯ ಹತ್ತಿರ ತುಂಗಭದ್ರಾ ಫೈಬರ್ ಕಾರ್ಖಾನೆ ಬರುತ್ತಿರುವುದು ನಿಜವೇ ?